

ನನ್ನ ಬಾಲ್ಯ ನೆನಪಾಗುತ್ತಿದೆ. ಬೆಳಿಗ್ಗೆ ಎದ್ದೊಡನೆ ಅಂಗಳದ ಕಸ ಉಡುಗಿ, ನೀರಿನ ಚಳೆಹಾಕಿ, ಕೊಟ್ಟಿಗೆಯ ಸಗಣಿಯ ಜತೆ ಕಸ ಸೇರಿಸಿ ತಿಪ್ಪೆಗೆ ಸುರಿವುದು ನನ್ನ ಖಾತೆಗೆ ಸೇರಿದ ಬಾಬತ್ತಾಗಿತ್ತು. ಇದನ್ನೆಲ್ಲ ಮುಗಿಸಿ ಕೈಕಾಲು ಮುಖ ತೊಳೆದುಕೊಂಡು ಕೂತರೆ ಅಮ್ಮ ಬಸಿತುಂಬ ಸುಡುಚಹಾ ಕೊಡುತ್ತಿದ್ದಳು. ಕಸಗುಡಿಸುವಲ್ಲಿ ನನಗೆ ತಮಿಳರ ಕಲ್ಯಾಣಮ್ಮ ಪ್ರತಿಸ್ಪರ್ಧಿಯಾಗಿದ್ದಳು. ಆಕೆಯ ಗುಡಿಸುವಿಕೆ ಎಂದರೆ ಬೀದಿಯ ದೂಳನ್ನು ಆಗಸಕ್ಕೆ ರಾಕೆಟ್ಟಿನಂತೆ ಹಾರಿಸುವುದಷ್ಟೆ. ಆಕೆ ಹಿಡುಗಲು ಹಿಡಿದು ಅಂಗಳಕ್ಕಿಳಿದರೆಂದರೆ, ಶಸ್ತ್ರಸಜ್ಜಿತ ಸೈನಿಕ ಕಣಕ್ಕೆ ಧುಮುಕಿದಂತೆ. ಆಗ ಎಷ್ಟೊಂದು ಬಗೆಯ ಕಸಬರಿಗೆಗಳಿದ್ದವು? ಈಚಲಬಾರಿಗೆ ಮನೆಗಸಕ್ಕೆ ಮೀಸಲು; ತೆಂಗಿನಕಡ್ಡಿಗಳದ್ದು ಅಂಗಳಕ್ಕೆ; ತಂಗಡಿಕೆ ಕೊಂಬೆಗಳದ್ದು ಕೊಟ್ಟಿಗೆಗೆ. ಆದರೆ ಇಷ್ಟು ಮಹತ್ವದ ಅಸ್ತ್ರಗಳನ್ನು ಚಪ್ಪಲಿ ಬಿಡುವ ಮೂಲೆಯಲ್ಲಿ ಇಡಲಾಗುತ್ತಿತ್ತು. ಭಿನ್ನಭೇದ ಇರುವ ಸಮಾಜದಲ್ಲಿ ಶ್ರಮಿಕರ ಸ್ಥಾನವಿಷ್ಟೇ ತಾನೇ? ಎಂತಲೇ ಸಮಾನತೆ ಪ್ರತಿಪಾದಿಸುವ ಸಂಘಟನೆಗಳು ಕಸಬರಿಗೆಯನ್ನು ಚಿಹ್ನೆಯಾಗಿಸಿಕೊಂಡವು. ನಮ್ಮ ಮನೆಗೆಲಸದ ಹುಲಿಗೆಮ್ಮ ಕಸ ಉಡುಗುವಾಗ ನನ್ನನ್ನು ಕಂಡರೆ, ತನ್ನೆರಡೂ ಕರಕಮಲಗಳ ನಡುವೆ ಹಿಡುಗಲು ಹಿಡಿದು ನಮಸ್ಕರಿಸುವಳು– ಸರಿಯಾಗಿ ಪಗಾರ ಕೊಡದಿದ್ದರೆ ಇದರಲ್ಲೇ ಬಡೀತೀನಿ ಎಂಬಂತೆ. ‘ಹಾಗೆ ನಮಸ್ಕಾರ ಮಾಡಬೇಡಮ್ಮ’ ಎಂದರೆ, ‘ಕಸಬಾರಿಗೆ ಏನು ಕೆಟ್ಟದೇನಯ್ಯಾ’ ಎಂದು ಪ್ರಶ್ನಿಸುವಳು. ಅವಳ ಪ್ರಶ್ನೆ ಉಚಿತವಾಗಿದೆ. ಕವಿ ಬಾಲೂರಾಯರು ಮುಂಜಾನೆಯ ಸೂರ್ಯನನ್ನು ‘ಮಂಜಿನ ಕಸಗುಡಿಸಿ ಎಲೆಯಡಿಕೆ ಹಾಕಿಕೊಂಡು ಕಸಬರಿಗೆ ಹಿಡಿದು ನಿಂತ ಜಾಡಮಾಲಿ’ಗೆ ಹೋಲಿಸಿದರು. ಜಗತ್ತಿನಲ್ಲಿ ಸೂರ್ಯನನ್ನು ಹೀಗೆ ಯಾರು ಇಷ್ಟು ಭವ್ಯವಾಗಿ ಬಣ್ಣಿಸಿದ್ದಾರೆ? ಕಸಬರಿಗೆ ಪವಿತ್ರ ವಸ್ತು. ಬಹುರೂಪಿ ಸಹ. ಸಿಟ್ಟಿನವರ ಕೈಗೆ ಕೂಡಲೇ ಒದಗುವ ಅದು ಹತ್ಯಾರವಾಗುತ್ತದೆ. ನೀನಾರಿಗಾದೆ ಎಲೆ